ವಾರದ ಪತ್ರ

## ಕಾಣದ ದೇವರಿಗಿಂತ ಮಿಗಿಲು

ದಿಗ್ವಿಜಯ ಸುದ್ದಿವಾಹಿನಿಯಲ್ಲಿ 'ದಿ ಬೆಸ್ಟ್' ಸಾಧಕರು ಎಂದು ಪ್ರಸಾರವಾದ ಅಂಗವಿಕಲರ ಅಪರೂಪದ ಸಾಧಕರ ಕಾರ್ಯಕ್ರಮ ಚೆನ್ನಾಗಿತ್ತು. ಈ ಸಾಧಕರ ಹಿಂದಿದ್ದವರು ಸೈಯದ್ ಸಲಾವುದ್ದೀನ್ ಪಾಷ ಮತ್ತು ಅವರ ಪತ್ನಿ ಮಹಿರಾ. ಹಲವಾರು ಅಂಗವಿಕಲ ಮಕ್ಕಳ ಬಾಳಿಗೆ ಬೆಳಕಾದ ದಂಪತಿ ಅಭಿನಂದನಾರ್ಹರು. ಬಡತನವೇ ನನ್ನ ಉಸಿರು ಎಂದು ಹೇಳುವ ಪಾಷ ಅಂಗವಿಕಲ ಮಕ್ಕಳನ್ನು ತಮ್ಮ ಮಕ್ಕಳು ಎಂದೇ ಭಾವಿಸಿದ್ದಾರೆ. ಅವರಲ್ಲೇ ದೇವರ ಭಾವವನ್ನು ಅವರು ಕಾಣುವುದಾಗಿ ಹೇಳಿಕೊಂಡಿದ್ದಾರೆ.

ಪಾಷ ದಂಪತಿ ತಮ್ಮ ಸೇವೆಗೆ ಗಿನ್ನೆಸ್ ವರ್ಲ್ಡ್ ದಾಖಲೆಯನ್ನು ಸೃಷ್ಟಿಸಿದ್ದಾರೆ. ಕಾರ್ಯಕ್ರಮದಲ್ಲಿ ಹಲವು ನೃತ್ಯವನ್ನು ಪ್ರಸ್ತುತಪಡಿಸಿದ ಮಾಸ್ಟರ್ ಪೀಸ್ ಆದ ವೀಲ್ ಚೇರ್ ಮೇಲೆ ಶಿವ ತಾಂಡವ ನೃತ್ಯ ಅದ್ಭುತವಾಗಿತ್ತು. ಮೂಗ ಮತ್ತು ಕಿವುಡರಿಗೂ ನೃತ್ಯ ತರಬೇತಿ ನೀಡಿದ ದಂಪತಿಯ ಶ್ರಮ ಸಾರ್ಥಕ ಎಂದು ಅನ್ನಿಸಿತು.

—ಶಿವಮೊಗ್ಗೆ ರಮೇಶ್

## ಕುತೂಹಲ ಇರಬೇಕಿತ್ತು

'ಮಗಳು ಜಾನಕಿ'ಯಲ್ಲಿ ಸಂಜನಾ ತನ್ನ ಪತಿ ಗೌತಮ್‌ನನ್ನು ಟೀವಿಯಲ್ಲಿ ಗುರುತಿಸಿದ್ದು ಸಮರ್ಪಕವೆನಿಸಲಿಲ್ಲ. ಅದರಲ್ಲಿ ಕುತೂಹಲವನ್ನು ಉಳಿಸುವಂತಹ ಸಾಧ್ಯತೆ ಇತ್ತು. ಗೌತಮ್– ವರುಣ್ ವೈಭವ್ ಹೆಸರಿನಲ್ಲಿ ಶಾಲೆಗೆ ಮುಖ್ಯ ಅತಿಥಿಯಾಗಿ ಆಗಮಿಸುತ್ತಾರೆ. ಆಗ ಅವನನ್ನು ನೋಡಿದ ಸಂಜನಾ ಗುರುತಿಸುತ್ತಾಳೆ ಎನ್ನುವುದಾಗಿದ್ದರೆ ಚೆನ್ನಾಗಿರುತ್ತಿತ್ತು. ವೀಕ್ಷಕರಲ್ಲಿಯೂ ಕುತೂಹಲ ಇರುತ್ತಿತ್ತು. ಯಾವುದೇ ಧಾರಾವಾಹಿ ಕಥಾನಕಗಳ ಮುಂದಿನದನ್ನು ಮೊದಲೇ ಪ್ರಸ್ತುತಪಡಿಸಿದರೆ ಅದರಲ್ಲಿ ಸ್ವಾರಸ್ಯವಿರುವುದಿಲ್ಲ.

—ಪೂರ್ಣಿಮಾ ಮೂರ್ತಿ ಬೆಂಗಳೂರು

## ಮಜಾ ಇಲ್ಲದ ಮಜಾ ಟಾಕೀಸ್

ಕಲರ್ಸ್ ಕನ್ನಡದಲ್ಲಿ ಪ್ರತಿ ಶನಿವಾರ ಪ್ರಸಾರವಾಗುತ್ತಿರುವ 'ಮಜಾ ಟಾಕೀಸ್' ಇತ್ತೀಚೆಗೆ ಅದೇಕೋ ಚರ್ವಿತ ಚರ್ವಣವೆನಿಸುತ್ತಿದೆ. ಅದೇ 'ಮಚ್ ಕೊಡೋ' ಮಾದರಿಯ ಪುನರಪಿ ಡೈಲಾಗ್‌ಗಳು. ಸೃಜನ್ ಲೋಕೇಶ್ ಸಹಪಾತ್ರಧಾರಿಗಳಿಂದ ತಮ್ಮ ಬಿಲ್ಡಪ್ ಹೆಚ್ಚಿಸಿಕೊಳ್ಳುವುದು. ಸದಾ ಇಂದ್ರಜಿತ್ ಲಂಕೇಶ್‌ರ ಬೋಳು ತಲೆಯ ಬಗ್ಗೆ ವ್ಯಂಗ್ಯ ಮಾಡುವುದು. ಹೆಚ್ಚುತ್ತಿರುವ ಡಬಲ್ ಮೀನಿಂಗ್ ಸಂಭಾಷಣೆಗಳು. ಪ್ರತಿವಾರ ಬರುವ ಅತಿಥಿಗಳು ಗಂಡಿರಲಿ, ಹೆಣ್ಣಿರಲಿ ತಬ್ಬಿಕೊಂಡೇ ಸ್ವಾಗತಿಸುವುದು. ನಿರ್ದೇಶಕ, ನಟಾರಾದಿಯಾಗಿ ಎಲ್ಲರಿಗೂ 'ತಾವು ಈ ಚಿತ್ರದಲ್ಲಿ ಏನೇನ್ ದಬ್ಬಾಕಿದೀರಾ?' ಎಂದು ಕೇಳುವುದು ಹಿತವೆನ್ನಿಸುವುದಿಲ್ಲ.

—ಕೆ. ಶ್ರೀನಿವಾಸರಾವ್ ಹರಪನಹಳ್ಳಿ

## ಖಳನಾಯಕಿಯರ ಪರೇಡ್

ವೃದ್ಧರು ಸಮಯ ಕಳೆಯಲು ಧಾರಾವಾಹಿಗಳನ್ನೇ ನೆಚ್ಚಿಕೊಂಡಿರುತ್ತಾರೆ. ಕೆಲವು ದಿನ ಅವರ ಜೊತೆ ಇದ್ದಿದ್ದರಿಂದ ತಲೆಬುಡ ಅರ್ಥವಾಗದಿದ್ದರೂ, ಅವರ ಜೊತೆ ಕೆಲವು ಸೀರಿಯಲ್‌ಗಳನ್ನು ನಾನೂ ನೋಡಿದೆ. ಎಲ್ಲ ಸೀರಿಯಲ್‌ಗಳಲ್ಲೂ ಕೆಲವು ಸಾಮಾನ್ಯ ಅಂಶಗಳನ್ನು ಗಮನಿಸಿದೆ.

ಎಲ್ಲ ಧಾರಾವಾಹಿಗಳಲ್ಲಿ ಖಳನಾಯಕಿಯರು ಇರುತ್ತಾರೆ. ಅವರು ಎಷ್ಟೇ ಕ್ರೈಮ್ ಮಾಡಿದರೂ ಸಿಕ್ಕಿಬೀಳದೇ ಇರುವುದರಿಂದ ಧಾರಾವಾಹಿಗಳು ಮುಗಿಯುವುದೇ ಇಲ್ಲ! ಖಳರಲ್ಲದ ಕೆಲವೇ ಪಾತ್ರಗಳು, ಬಹಳ ಸಂಭಾವಿತರಾಗಿದ್ದು, ಖಳರ, ಖೂಳರ ತಪ್ಪುಗಳನ್ನು ನಿರ್ಲಕ್ಷ್ಯ ಮಾಡುತ್ತಾರೆ. ನಂತರ ಅವರ ಕಾಟ ಹೆಚ್ಚಾಗಿ ಇನ್ನೇನು ಪ್ರಾಣ ಹೋಗುತ್ತದೆ ಎನ್ನುವಾಗ ಸರ್ಜರಿಗೆ ಮುಂದಾಗುತ್ತಾರೆ. ಬಹಳ ಬುದ್ಧಿವಂತರಾದ ಈ ಸಂಭಾವಿತರು ದುಷ್ಟರ ವಿರುದ್ಧ ಬಹಳಷ್ಟು ಸಾಕ್ಷಿಗಳನ್ನು ಕಲೆಹಾಕಿದರೂ ಚತುರ ಖಳನಾಯಕಿಯರ ಮುಂದೆ ಇವರ ಆಟ ನಡೆಯಲ್ಲ. ಒಮ್ಮೊಮ್ಮೆ ರೆಡ್ ಹ್ಯಾಂಡೆಡ್ ಆಗಿ ಹಿಡಿದರೂ ಪೃಥ್ವಿರಾಜ್ ಚೌಹಾಣ್, ಘೋರಿಯನ್ನು ಬಿಟ್ಟಂತೆ, ಖಳ/ಖಳೆಯರಿಗೂ ಕ್ಷಮಾದಾನ ಸಿಕ್ಕು ಮುಂದಿನ ಸಂಚು ರೂಪಿಸಲು ದಾರಿ ಮಾಡಿಕೊಡುತ್ತಾರೆ.

ಖಳನಾಯಕಿಯರಿಗೆ ವಯೋಮಿತಿ ಇಲ್ಲ. ಎಪ್ಪತ್ತರಲ್ಲೂ, ಇಪ್ಪತ್ತರ ಫಿಟ್ನೆಸ್ ತೋರುವ ಅವರು ಕೊಲೆಗೂ ಕೈ ಹಾಕಲು ಹಿಂದೇಟು ಹಾಕುವುದಿಲ್ಲ. ಧಾರಾವಾಹಿಗಳ ಪುರುಷ ಪಾತ್ರಗಳಲ್ಲಿ 'ಹೆಚ್ಚಿನವು ನಾಮ್ ಕಾ ವಾಸ್ತೆ...' ಪಕ್ಷಪಾತಕ್ಕೆ ತುತ್ತಾದವರಂತೆ, ಹತಾಶರಂತೆ ಇರುತ್ತಾರೆ! ಖಳನಾಯಕಿಯರ ಸುಪಾರಿ ರೌಡಿಗಳು ಮಾತ್ರ ಪುರುಷರೇ ಆಗಿರುವುದು ವಿಶೇಷ!

—ವೀಣಾ ಜೋಶಿ, ಬಾರ್ಕೂರು

## ಕೃತಿಕಾರರಿಗೂ ಕೃತಜ್ಞತೆ ಬೇಕು

ಕನ್ನಡದ ಖಾಸಗಿ ಚಾನೆಲ್‌ಗಳು ಸಂಗೀತದ ಸ್ಪರ್ಧೆಯನ್ನು ಏರ್ಪಡಿಸುವುದರ ಮೂಲಕ ಸಂಗೀತ ಸುಧೆ ಪಸರಿಸುತ್ತಿವೆ. ಎಲೆಮರೆ ಕಾಯಿಯಂತಿರುವ ಪ್ರತಿಭೆಯನ್ನು ಗುರುತಿಸಿ ವೇದಿಕೆ ಕಲ್ಪಿಸುವುದರ ಮೂಲಕ ಆ ಪ್ರತಿಭೆಗಳಿಗೆ ಮನ್ನಣೆ ನೀಡಿದಂತಾಗುತ್ತಿದೆ. ಆ ಹೊತ್ತಿನಲ್ಲಿ ಕನ್ನಡ ಸ್ಟಾರ್ ನಟರ ಹುಟ್ಟುಹಬ್ಬ ಏನಾದರೂ ಇದ್ದರೆ ಅದಕ್ಕಾಗಿ ವಿಶೇಷ ಸಂಚಿಕೆಯನ್ನು ರೂಪಿಸಿ ಪ್ರಸಾರ ಮಾಡಲಾಗುತ್ತದೆ. ಆ ನಾಯಕರ ಚಿತ್ರದ ಹಾಡುಗಳನ್ನು ಸ್ಪರ್ಧಿಗಳಿಂದ ಹಾಡಿಸಲಾಗುತ್ತದೆ. ಆದರೆ ಆ ಸಿನಿಮಾದ ಹಾಡುಗಳ ಟ್ಯೂನ್‌ಗೆ ಸಾಹಿತ್ಯ ಬರೆದ, ಸಂಗೀತ ನೀಡಿದ, ಹಿನ್ನೆಲೆಯಲ್ಲಿ ಹಾಡಿದವರ ಹೆಸರನ್ನೇ ಪ್ರಸ್ತಾಪಿಸುವುದಿಲ್ಲ. ಚಿತ್ರದಲ್ಲಿ ನಟಿಸುವ ನಾಯಕರು ಸಂಗೀತದಲ್ಲಿ ಅವರ ಭಾಗವಹಿಸುವಿಕೆ ಕಡಿಮೆ ಇರುತ್ತದೆ. ಆದರೂ ಆ ನಟರೇ ಎಲ್ಲವನ್ನು ಮಾಡಿದ್ದಾರೆ ಎನ್ನುವಂತೆ ಪ್ರತಿಬಿಂಬಿಸಲಾಗುತ್ತದೆ. ಸಂಗೀತದಲ್ಲಿ ಕೆಲಸ ಮಾಡಿದವರನ್ನು ಬಿಟ್ಟು ಚಿತ್ರದಲ್ಲಿ ನಟಿಸಿರುವ ನಾಯಕರನ್ನೆ ಹೊಗಳುತ್ತಾರೆ. ತೆರೆಯ ಮರೆಯಲ್ಲಿ ಶ್ರಮವಹಿಸಿದವರನ್ನೂ ಸ್ಮರಿಸುವ ಮೂಲಕ ಪರಿಚಯಿಸುವುದು ಸೂಕ್ತ. ವೀಕ್ಷಕರಾದ ನಮಗೆ ಅದೂ ತಿಳಿವಳಿಕೆಯ ಭಾಗ ಆಗಬೇಕು ಎಂದು ಬಯಸುತ್ತೇನೆ.

—ಅಂಬಿ ಎಸ್. ಹೈಯ್ಯಾಳ್ ಹುಣಸಗಿ

## ಸಹನೆಗೆ ಸಲಾಂ

'ಮಾಂಗಲ್ಯಂ ತಂತುನಾನೇನ'ದಲ್ಲಿ ಶ್ರಾವಣಿ ತೇಜಸ್ವಿ ಯಾರದೋ ಕುತಂತ್ರಕ್ಕೆ ಒಳಗಾಗಿ ಮದುವೆಯಾದವವರು, ಶ್ರಾವಣಿಯ ತಂದೆ ಧಾರಾವಾಹಿಯ ಉದ್ದಕ್ಕೂ ಎಲ್ಲರ ಮೇಲೆ ಅನವಶ್ಯಕವಾಗಿ ಕಿರುಚಾಡಿ ವೀಕ್ಷಕರ ಪಾಲಿಗೆ ಅಕ್ಷರಶಃ ಅಸಹ್ಯವಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಎಷ್ಟೋ ಬಾರಿ ಅಳಿಯ ತೇಜಸ್ವಿ ಬಳಿ ಕಿರುಚಾಡಿ ಕೊರಳಿನ ಪಟ್ಟಿ ಹಿಡಿಸಿಕೊಂಡವನು, ಅಂತಹವನು ಮಗಳು ಕಾಣೆಯಾಗಿದ್ದಾಳೆ ಎಂಬ ನೆಪದಲ್ಲಿ ಅಳಿಯನ ಜೊತೆಗೂಡಿ ಕಾರಿನಲ್ಲಿ ಮೂಡಿಗೆರೆಗೆ ಹೊರಡುತ್ತಾನೆ. ಕಾರಿನಲ್ಲಿ ಒಂದೇ ಸಮನೆ ಅಳಿಯನನ್ನು ಹೀಯಾಳಿಸುತ್ತಾ ದಾರಿಯುದ್ದಕ್ಕೂ ಎಗರಾಡುತ್ತಿರುತ್ತಾನೆ. ಬೇರೆಯವರಾದರೆ ಮುಖಮೂತಿ ನೋಡದೆ ಬಾರಿಸಿಬಿಡುತ್ತಿದ್ದರು. ಆದರೆ ತೇಜಸ್ವಿಯ ಸಹನೆ ವೀಕ್ಷಕರಾಗಿ ಎಲ್ಲರೂ ಮೆಚ್ಚುವಂತದ್ದು.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ಜೊತೆಯಾಗಿ ಬಾಳಲಿ

ಕಲರ್ಸ್ ಸೂಪರ್‌ನಲ್ಲಿ ರಾತ್ರಿ 9.30ಕ್ಕೆ ಪ್ರಸಾರವಾಗುವ ಧಾರಾವಾಹಿ 'ಮಗಳು ಜಾನಕಿ' ಚೆನ್ನಾಗಿದೆ. ಎಲ್ಲಾ ಪಾತ್ರಧಾರಿಗಳೂ ಉತ್ತಮ ಅಭಿನಯ ಮಾಡಿದ್ದಾರೆ. ಮಗಳು ಜಾನಕಿ ಖಾಕಿ ಡ್ರೆಸ್ಸಿನಲ್ಲಿ ಚೆನ್ನಾಗಿ ಕಾಣುತ್ತಾಳೆ. ಅರ್ಧ ಗಂಟೆ ಎಷ್ಟು ಬೇಗ ಮುಗಿದು ಹೋಗುತ್ತೆ ಎನ್ನುವುದೇ ಗೊತ್ತಾಗುವುದಿಲ್ಲ. ಜಾನಕಿ– ನಿರಂಜನರೂ ವಿಚ್ಛೇದನದ ಯೋಚನೆಯಿಂದ ಹೊರಬಂದು ರಾಜೀ ಮಾಡಿಕೊಂಡು ಇಬ್ಬರೂ ಪ್ರೀತಿಯಿಂದ ಇರಲಿ ಎನ್ನುವುದು ಆಸೆ.

—ಬಿ. ಎಸ್. ಮುಳ್ಳೂರ, ಹಲಗತ್ತಿ

